









ಸುನೀಲ ಚಿತ್ರಕಾರ ಹಿರೇಕೆರೂರು ತಾಲ್ಲೂಕು ಕಚವಿಯ ‘ಪದ್ಮಶ್ರೀ ಸರ್ದಾರ್ ವೀರನಗೌಡ ಪಾಟೀಲ ಸರಕಾರಿ ಪ್ರೌಢಶಾಲೆ’ಯಲ್ಲಿ ಚಿತ್ರಕಲಾ ಶಿಕ್ಷಕರು. ಮಕ್ಕಳೊಂದಿಗೆ ಪಾದರಸದಂತೆ ಬೆರೆಯುವ ಇವರು ಚಿತ್ರಕಲೆಯ ಮೂಲಕ ಮಕ್ಕಳಲ್ಲಿನ ಕಲ್ಪನೆಗಳು ರೇಖೆ ಬಣ್ಣಗಳ ರೂಪದಲ್ಲಿ ಅಭಿವ್ಯಕ್ತಿಗೊಳ್ಳಲು ಕಾರಣರಾಗಿದ್ದಾರೆ. ಬೋಧನೆಯಲ್ಲಿ ಮಾತ್ರವಲ್ಲ, ಕಲಾಕೃತಿಗಳ ರಚನೆಯಲ್ಲಿ ಕೂಡ ಸುನೀಲ ಗಟ್ಟಿಗರು.

ಸುನೀಲ ಚಿತ್ರಕಾರರು ಕುಂಚ ಹಿಡಿದು ಕುಳಿತರೆ ಕ್ಯಾನ್ವಾಸ್ ಮೇಲೆ ಬಣ್ಣದ ಚಿತ್ತಾರಗಳು ಮೂಡುತ್ತವೆ. ತೈಲವರ್ಣ, ಜಲವರ್ಣದೊಡನೆ ಆಟವಾಡುವುದೆಂದರೆ ಅವರಿಗೆ ಚೆನ್ನಾಟ! ಚುಕ್ಕಿ ಚಿತ್ರ ಬಿಡಿಸಿದರೆ ನೋಡಿದವರು ಸೈ ಎನ್ನಬೇಕು. ವ್ಯಂಗ್ಯಚಿತ್ರದಲ್ಲೂ ಕೈಯಾಡಿಸಿದ್ದಾರೆ. ಹಲವಾರು ಗಣ್ಯರ ಚಿತ್ರ ಬಿಡಿಸಿದ್ದಾರೆ. ಈಗ ಅವರ ಕುಂಚ ಕಮ್ಮಟದಲ್ಲಿ ಕೊರೊನಾ ಚಿತ್ರಗಳು ಮೂಡಿವೆ.

ಚಿತ್ರಕಾರರಿಗೆ ಕಲೆಯೆನ್ನುವುದು ಕುಟುಂಬದ ಬಳುವಳಿ. ಅವರದು ಕಲಾವಿದರ ಕುಟುಂಬ. ಹೀಗಾಗಿ ಸುನೀಲರು ಸಹಜವಾಗಿ ಚಿತ್ರಕಲೆಯತ್ತ ವಾಲಿದರು. ಚಿತ್ರಕಲಾ ಶಿಕ್ಷಕರಾಗಿರುವುದರಿಂದ ವೃತ್ತಿ ಪ್ರವೃತ್ತಿ ಎರಡೂ ಆಗಿರುವ ಸಂತಸ ಅವರದು.

ಚಿತ್ರಕಾರರ ಮನೆಗೆ ಹೋದರೆ ಗೋಡೆ ತುಂಬ ಚಿತ್ತಾರಗಳು! ಒಂದಿಂಚೂ ಖಾಲಿ ಗೋಡೆ ಕಾಣಿಸುವುದಿಲ್ಲ. ಆ ಚಿತ್ರಗಳ ನಡುವೆ ಕೊರೊನಾ ಕುರಿತ ಚಿತ್ರಗಳು ಥಟ್ಟನೆ ಗಮನಸೆಳೆಯುತ್ತವೆ. ಒಂದು ಕಲಾಕೃತಿಯಲ್ಲಿ, ಶ್ರೀರಾಮ ಬಾಣ ಪ್ರಯೋಗಿಸಿ ಕೊರೊನಾ ರೋಗಾಣುಗಳನ್ನು ಕೊಲ್ಲುತ್ತಿದ್ದರೆ, ಮತ್ತೊಂದರಲ್ಲಿ ದೇವಿ ತನ್ನ ಉದ್ದ ನಾಲಿಗೆಯನ್ನು ಚಾಚಿ ವೈರಸ್ ನುಂಗುತ್ತಿದ್ದಾಳೆ.

ಕೋವಿಡ್19 ಸೋಂಕಿಗೆ ಒಳಗಾಗದಂತೆ ಜನರು ವಹಿಸಬೇಕಾದ ಮುಂಜಾಗ್ರತೆ ಕುರಿತಂತೆ ಚಿತ್ರಕಾರರ ಕಲೆ ಸಹೃದಯರ ಗಮನಸೆಳೆಯುವಂತಿದೆ. ವೈರಸ್ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಡಂಗುರ ಸಾರುವುದು, ಕೈತೊಳೆಯುವುದು, ಮಾಸ್ಕ್ ಮಹತ್ವ, ಸಾಮಾಜಿಕ ಅಂತರದ ಅಗತ್ಯ, ವೈದ್ಯರು ಮತ್ತು ಪೊಲೀಸರಿಗೆ ಗೌರವ ಸೂಚಿಸುವುದು – ಇವೆಲ್ಲ ವಿಷಯಗಳು ಚಿತ್ರಕಾರರ ಕಲಾಕೃತಿಗಳಲ್ಲಿ ಒಡಮೂಡಿವೆ. ಕೊರೊನಾ ಮದ್ದನ್ನು ಕಂಡುಹಿಡಿಯಲು ವಿವಿಧ ಪ್ರಾಣಿಗಳ ಮೇಲೆ ನಡೆಯುತ್ತಿರುವ ಪ್ರಯೋಗ ಕುರಿತ ವ್ಯಂಗ್ಯಚಿತ್ರ ರಚಿಸಿದ್ದಾರೆ. ಸೂರ್ಯನ ಶಾಖವೇ ಕೊರೊನಾಕ್ಕೆ ಮದ್ದಾಗಬಹುದೆನ್ನುವ ಆಶಯ ಕಲಾಕೃತಿಯಲ್ಲಿದೆ.

ಕೊರೊನಾ ಮಾತ್ರವಲ್ಲ ಸ್ವಚ್ಛತೆ, ಶಾಲಾ ದಾಖಲಾತಿ, ನೆರೆ ಹಾವಳಿ, ಬರ, ಮುಂತಾದ ಸಮಕಾಲೀನ ವಿಷಯಗಳಿಗೆ ಸಂಬಂಧಿಸಿದಂತೆಯೂ ಸುನೀಲ ಚಿತ್ರಕಾರರ ಕುಂಚ ಸ್ಪಂದಿಸಿದೆ. ಇವರು ಕಾರ್ಯ ನಿರ್ವಹಿಸುವ ಶಾಲೆಯಲ್ಲಿನ ಕೊಠಡಿಗಳ ಗೋಡೆಗಳು ಕೂಡ ಚಿತ್ರಕಾರರಿಗೆ ಕ್ಯಾನ್ವಾಸ್ ಆಗಿರುವುದು ಗಮನಾರ್ಹ. ಗ್ರಾಮೀಣ ಪ್ರದೇಶದಲ್ಲಿದ್ದುಕೊಂಡು ಚಿತ್ರಕಲೆಯ ಮೂಲಕ ಪ್ರಚಲಿತ ವಿದ್ಯಮಾನಗಳಿಗೆ ಪರಿಣಾಮಕಾರಿಯಾಗಿ ಸ್ಪಂದಿಸುತ್ತಿರುವ ಚಿತ್ರಕಾರರ ಕಲೆಯನ್ನು ನಾಡಿನ ಕಲಾವಲಯ ಗಂಭೀರವಾಗಿ ಪರಿಗಣಿಸಬೇಕಾಗಿದೆ.